ಇನ್‌ಫ್ಲುಎನ್‌ಜಾ ಪಿಡುಗಿನಿಂದ ಲಕ್ಷೋಪಲಕ್ಷ ಜನ ಸತ್ತರು. ಸ್ವಾಮಿ ಪ್ರೇಮಾನಂದರು ಪರ್ವತ ಪ್ರದೇಶದಲ್ಲಿ ಇದ್ದಾಗ ಅಂತಹ ಫ್ಲೂ ಜ್ವರಕ್ಕೆ ತುತ್ತಾದರು. ಸ್ವಾಮಿ ಶಿವಾನಂದರು ಬೇಲೂರು ಮಠದಿಂದ ಅಲ್ಲಿಗೆ ಹೋಗಿ ಅವರನ್ನು ಬಲರಾಮ ಬೋಸರ ಮನೆಗೆ ಕರೆ ತಂದರು. ಎಲ್ಲಾ ಆರೈಕೆಗಳನ್ನೂ ಅವರಿಗೆ ಮಾಡಲಾಯಿತು. ಆದರೆ, ನಾಲ್ಕು ದಿನಗಳಲ್ಲಿ ಅವರು ಕಾಲವಾದರು.

ಸ್ವಾಮಿ ಬ್ರಹ್ಮಾನಂದರು ಆಗ ಬಲರಾಮ ಬೋಸರ ಮನೆಯಲ್ಲಿ ಹತಾಶರಾಗಿ ಇದ್ದರು. ಮತ್ತೆ ಮತ್ತೆ ಪ್ರೇಮಾನಂದರ ಕೊಠಡಿಗೆ ಹೋಗುತ್ತಿದ್ದರು. ಅವರು ಒಮ್ಮೆ ಪ್ರೇಮಾನಂದರಿಗೆ ಹೇಳಿದರು, ''ತಮ್ಮಾ, ನಮ್ಮ ಗುರುಮಹಾರಾಜರು ನಿನಗೆ ನೆನಪಾಗು ತ್ತಿದ್ದಾರೆಯೆ? ಪ್ರೇಮಾನಂದರು ಶಾಂತವಾದ, ಸಂತೋಷದ ಮಂದಹಾಸ ಬೀರಿದರು. ಕಾಲವಾಗಲು ಎರಡು ಮೂರು ದಿನ ಗಳಷ್ಟೇ ಇರುವಾಗ ತಮಗೆ ಸೇವೆ ಮಾಡುತ್ತಿದ್ದ ಸಂನ್ಯಾಸಿಯನ್ನು ಕರೆದು, ''ನೋಡು, ನಾನು ನಿನ್ನನ್ನು ಒಂದು ವಿಷಯ ಕೇಳ ಬೇಕೆಂದಿದ್ದೇನೆ.'' ''ಹೇಳಿ, ಸ್ವಾಮೀಜಿ.'' ''ನೀನು ಭಕ್ತರ ಸೇವೆ ಮಾಡಬಲ್ಲೆಯಾ?'' ''ಹೌದು, ಸ್ವಾಮೀಜಿ.'' ''ಅದನ್ನು ಯಾವಾ ಗಲೂ ಮಾಡು.'' ''ಆಗಲಿ ಸ್ವಾಮೀಜಿ, ಅದನ್ನು ಮಾಡುತ್ತೇನೆಂದು ನಿಮಗೆ ಮಾತು ಕೊಡುತ್ತೇನೆ.'' ಅದೇ ಅವರ ಕೊನೆಯ ಆಸೆ, ಕೊಟ್ಟ ಕೊನೆಯ ಆಸೆ.

ಸ್ವಲ್ಪ ಕಾಲದ ನಂತರ ಅವರು ಸ್ವಾಮಿ ಶಾರದಾನಂದರಿಗೆ ಹೇಳಿದರು, ''ನನಗೆ ಅಚ್ಚ ಹಳದಿ ವಸ್ತ್ರವನ್ನು ಉಡಲು ಮತ್ತು ಮಲ್ಲಿಗೆಯಂತೆ ಬಿಳುಪಾದ ಅನ್ನವನ್ನು ತಿನ್ನಲು ಬಹಳ ಆಸೆ ಎಂದು ನಿನಗೆ ಗೊತ್ತಿದೆ.'' ಸ್ವಾಮಿ ಶಾರದಾನಂದರಿಗೆ ಅರ್ಥವಾಯಿತು. ಅದು ಶ್ರೀರಾಧೆಯ ಸಾಂಕೇತಿಕ ವಿವರಣೆ. ಸ್ವಾಮಿ ಪ್ರೇಮಾನಂದರು ರಾಧೆಯ ಅಂಶವೆಂದು ಶ್ರೀರಾಮಕೃಷ್ಣರು ಹೇಳಿದ್ದರು. ಇನ್ನು ಹೆಚ್ಚು ಕಾಲ ಪ್ರೇಮಾನಂದರು ಬದುಕುವುದಿಲ್ಲವೆಂದು ಸ್ವಾಮಿ ಶಾರದಾನಂದರಿಗೆ ತಿಳಿಯಿತು. ೧೯೧೮, ಜುಲೈ ೩೦ರಂದು ಸ್ವಾಮಿ ಪ್ರೇಮಾನಂದರು ಕಾಲವಾದರು. ಅವರು ಭುವಿಯ ಮೇಲೆ ಐವತ್ತೇಳು ವರ್ಷಗಳ ಕಾಲ ಬದುಕಿದ್ದರು.

ಅಂದು ಮಧ್ಯಾಹ್ನ ಪ್ರೇಮಾನಂದರ ಮರಣವಾರ್ತೆಯನ್ನು ಕೇಳಿದ ಶ್ರೀಮಾತೆಯವರು ದೀರ್ಘಕಾಲ ಬಹಳವಾಗಿ ಅತ್ತರು. ''ಬಾಬುರಾಮ ನನ್ನ ಹೃದಯಕ್ಕೆ ಅಷ್ಟೊಂದು ಪ್ರೀತಿಪಾತ್ರನಾದವ! ಬೇಲೂರು ಮಠದ ಎಲ್ಲಾ ಶಕ್ತಿ, ಭಕ್ತಿ ಮತ್ತು ಬುದ್ಧಿ ನನ್ನ ಬಾಬುರಾಮನಲ್ಲಿ ಮೂರ್ತರೂಪವಾಗಿ, ಗಂಗಾ ನದಿಯ ದಡ ದಲ್ಲಿ ನಡೆದಾಡುತ್ತಿತ್ತು'' ಎಂದು ಹೇಳಿದರು. ಹೌದು, ಸ್ವಾಮಿ ಪ್ರೇಮಾನಂದರ ಮರಣದಲ್ಲಿ ಶ್ರೀರಾಮಕೃಷ್ಣರು ತಮ್ಮ ಪ್ರೀತಿ ಮತ್ತು ಭಕ್ತಿಯ ಅಂಶವನ್ನು ಹಿಂದಕ್ಕೆ ಸೆಳೆದುಕೊಂಡರು ಎಂದು ಶ್ರೀರಾಮಕೃಷ್ಣರ ಎಲ್ಲ ಶಿಷ್ಯರೂ ಹೇಳಿದರು.

ನಾನು ಈಗಲೂ ಅವರ ನಗುಮುಖವನ್ನು ನೋಡುತ್ತೇನೆ, ಅವರ ಧ್ವನಿಯನ್ನು ಕೇಳುತ್ತೇನೆ. ಅವರು ಶಿಷ್ಯರನ್ನು ಬಿಟ್ಟುಹೋಗ ದಿದ್ದರೂ, ಅವರಿಗೆ ಅನೇಕ ಮಂದಿ ಶಿಷ್ಯರಿದ್ದಾರೆ. ಅವರಲ್ಲಿ ಅಂತಹ ವಿಶೇಷವೇನೂ ಇರದಿದ್ದರೂ, ಅವರು ಇಡೀ ನಾಟಕದ ಸಾರ ವಾಗಿದ್ದರು. ಪ್ರೇಮದ, ಸಂತೋಷದ ದಿವ್ಯಕಾಂತಿಯನ್ನು ಹೊರ ಸೂಸುವ ಅಸಾಧಾರಣ ಮನಮೋಹಕ ಆಕಾರ ಅವರಿಗಿತ್ತು; ಆದರೂ ನಿಮ್ಮನ್ನು ದಿಗ್ಭ್ರಮೆಗೊಳಿಸುವ ಯಾವ ಅಂಶವೂ ಅವರಲ್ಲಿ ಇರಲಿಲ್ಲ. ನೀವು ಹೋಗಿ ಅವರನ್ನು ನಿಮ್ಮ ಸ್ವಂತದವರೆಂಬಂತೆ– ತಂದೆ, ತಾಯಿ, ಸಖ ಎಂಬಂತೆ ಆಲಂಗಿಸಬಹುದು ಎಂಬ ಭಾವ ನಿಮಗುಂಟಾಗುವುದು. ಸತ್ಯವಲ್ಲದ ಏನನ್ನೂ ಅವರು ಯಾರಿಗೂ ಹೇಳಲಿಲ್ಲ. ಅವರಿಗೇ ಮಕ್ಕಳಿಲ್ಲ, ಆದರೆ ಇತರರ ಅನೇಕ ಮಕ್ಕಳನ್ನು ಪ್ರೀತಿ ವಿಶ್ವಾಸಗಳಿಂದ ಬೆಳೆಸಿ, ಅವರನ್ನು ಮಹಾಪುರುಷರಾಗುವಂತೆ, ಶ್ರೇಷ್ಠ ಮಹಿಳೆಯರನ್ನಾಗಿ ಮಾಡುವಂತೆ ಅವರು ಇದ್ದರು; ಸಂಘದಲ್ಲಿ ಅವರ ಸ್ಥಾನ ಅದು. ಅವರ ಜೀವನ, ಅವರ ಕನಸು ಇವೆಲ್ಲಾ ಈಗ ನೆನಪುಗಳಷ್ಟೆ. ಆದರೆ ಯಾರು ಅವರನ್ನು ನೋಡಿ ದ್ದರೋ ಅವರಿಗೆ ಅವರು ಬೋಧಿಸಿದ ಜೀವನದಲ್ಲಿ ನಡೆದು ತೋರಿಸಿದ ಆದರ್ಶಗಳು ಸತ್ಯವಾಗಿವೆ. ಸೇವೆ, ಸೇವೆ, ಸೇವೆ – ತಮಗಾಗಿ ಏನನ್ನೂ ಬಯಸದಿರುವುದು, ತಮ್ಮದಾಗಿ ಏನೂ ಇಲ್ಲದಿರುವುದು, ಎಲ್ಲರನ್ನೂ ಪ್ರೀತಿಸುವುದು – ಈ ಆದರ್ಶಗಳು ನಮ್ಮ ಜೀವನದ ಹಾಸು ಹೊಕ್ಕಾಗಿವೆ. ಸ್ವಾಮಿ ಪ್ರೇಮಾನಂದರು ರಾಮಕೃಷ್ಣ ಸಂಘವನ್ನು ಕಟ್ಟುವುದಕ್ಕೆ ಏನೇನು ಕೊಡುಗೆಯನ್ನು ನೀಡಿದರೋ, ಅದು ಈಗ ಕಾಣದಿದ್ದರೂ ಮುಂದಿನ ವರ್ಷಗಳಲ್ಲಿ ಹಲವು ಪೀಳಿಗೆಯ ಸಂನ್ಯಾಸಿಗಳಿಗೆ, ಭಕ್ತರಿಗೆ ಭಗವಂತನ ನೈಜ ಸೇವಕರಾಗುವಂತೆ ನಿರಂತರ ಸ್ಫೂರ್ತಿ ನೀಡುವುದು; ಏಕೆಂದರೆ, ಅವರು ನಿಜವಾಗಿಯೂ ಭಗವಂತನ ನೈಜ, ಮಹಾನ್ ಸೇವಕರಾಗಿದ್ದರು. *(ಮುಗಿಯಿತು)*

## ತ್ಯಾಗ – ವಿವೇಕ

''ಅನ್ನ ಬೆಂದಿದೆಯೇ ಎಂದು ನೋಡಲು ಒಂದು ಅಗುಳನ್ನು ಒತ್ತಿ ನೋಡಿದರೆ ಸಾಕು. ಹೀಗೆಯೇ ಸಂಸಾರ ನಿತ್ಯವೋ ಅನಿತ್ಯವೋ ಎಂದು ತಿಳಿಯಲು ಸಂಸಾರದ ಎರಡು ಮೂರು ವಸ್ತುಗಳನ್ನು ಪರೀಕ್ಷಿಸಿ ನೋಡಿದರೆ ಸಾಕು. ಮನುಷ್ಯ ಹುಟ್ಟುತ್ತಾನೆ, ಕೆಲವು ದಿನ ಬದುಕಿರುತ್ತಾನೆ. ಅನಂತರ ಸತ್ತು ಹೋಗುತ್ತಾನೆ. ನಾಮರೂಪಗಳಿರುವ ವಸ್ತುಗಳೆಲ್ಲದರ ಅವಸ್ಥೆಯೂ ಇದೇ. ಪೃಥ್ವಿ, ಸೂರ್ಯ, ಚಂದ್ರ ಇವೆಲ್ಲ ನಾಮರೂಪಗಳಿಂದ ಕೂಡಿವೆ. ಆದ್ದರಿಂದ ಅವುಗಳೂ ಹಾಗೆಯೇ. ಹೀಗೆ ಸಂಸಾರ ಅನಿತ್ಯ , ಅಸತ್ ಎಂದು ತಿಳಿದ ಮೇಲೆ ಅದನ್ನು ಮತ್ತೆ ಪ್ರೀತಿಸಲಾಗುವುದಿಲ್ಲ. ಮನಸ್ಸು ಅದನ್ನು ತ್ಯಜಿಸಿ, ವಾಸನೆಯಿಂದ ಮುಕ್ತವಾಗುವುದು. ಆಗ ಜಗತ್ಕಾರಣನಾದ ಭಗವಂತನ ದರ್ಶನವಾಗುತ್ತದೆ.''

**–ಶ್ರೀರಾಮಕೃಷ್ಣ**

ಸ್ವಾಮಿ ನಿತ್ಯಸ್ಥಾನಂದ

# ಭಕ್ತನ ಲಕ್ಷಣ




## ಭಾಗ – ೫

**ಗತವ್ಯಥಃ :** ಭಕ್ತನಿಗೆ ವ್ಯಥೆಯಿಲ್ಲ. ವ್ಯಥೆಗೆ ಮುಖ್ಯವಾಗಿ ಎರಡು ಕಾರಣಗಳಿವೆ – ಅನಿಷ್ಟಪ್ರಾಪ್ತಿ ಮತ್ತು ಇಷ್ಟ ಅಪ್ರಾಪ್ತಿ. ಭಕ್ತನಿಗೆ ಅನಿಷ್ಟವಾದುದು ಯಾವುದೂ ಇಲ್ಲ, ಹಾಗೂ ಇಷ್ಟವಾದುದು ಭಗವಂತನ ಪ್ರಾಪ್ತಿಯಾಗಿದೆ. ಸಾಪೇಕ್ಷಿಕ ದೃಷ್ಟಿಯಿಂದ ಇಷ್ಟಾನಿಷ್ಟ ಗಳೆರಡೂ ಈ ಅನಿತ್ಯ ಪ್ರಪಂಚಕ್ಕೆ ಸಂಬಂಧಿಸಿದುವು. ನಮಗೆ ಕೆಲವೊಂದು ಮತ್ತು ಕೆಲವರು ಇಷ್ಟ, ಹಾಗೂ ಕೆಲವೊಂದು ಮತ್ತು ಕೆಲವರು ಅನಿಷ್ಟ. ಕೆಲವೊಮ್ಮೆ ನಾವಿಷ್ಟಪಟ್ಟಿದ್ದು ದೊರೆಯುತ್ತದೆ, ಕೆಲವೊಮ್ಮೆ ದೊರೆಯುವುದಿಲ್ಲ. ಇದು ಕ್ರಮವಾಗಿ ಸುಖ ಮತ್ತು ದುಃಖವನ್ನು ನೀಡುತ್ತದೆ. ಹೀಗೆಯೇ ಅನಿಷ್ಟದ ವಿಷಯದಲ್ಲಿಯೂ ಕೂಡ. ಎಲ್ಲಿಯವರೆಗೆ ಪ್ರಪಂಚವನ್ನೇ ನೆಚ್ಚಿಕೊಂಡಿರುತ್ತೇವೊ ಅಲ್ಲಿಯವರೆಗೂ ಈ ಸುಖದುಃಖಗಳ ಮಿಶ್ರ ಅನುಭವ ತಪ್ಪಿದ್ದಲ್ಲ. ಆದರೆ ಭಗವಂತನನ್ನೇ ನೆಚ್ಚಿಕೊಂಡಿರುವವರಿಗೆ ಸುಖದುಃಖಗಳಿದ್ದರೂ ವ್ಯಥೆ ಇರುವುದಿಲ್ಲ.

ಇತ್ತೀಚೆಗೆ ನಾವು ಹೊಸಬಗೆಯ ವ್ಯಥೆಗಳ ಬಗ್ಗೆ ಬಹಳಷ್ಟು ಕೇಳುತ್ತೇವೆ. ಒತ್ತಡ, ಬಿಗಿತ, ದುಗುಡತೆ (stress, tension, depression etc.) ಮುಂತಾದ ಸಮಸ್ಯೆಗಳು ಇತ್ತೀಚೆಗೆ ಹೆಚ್ಚು ಪ್ರಚಲಿತವಾಗಿರುವಂತೆ ಕಂಡುಬರುತ್ತದೆ – ಬದಲಾದ ಸಾಮಾಜಿಕ ಪರಿಸ್ಥಿತಿಯಿಂದಾಗಿಯೂ, ಕುಟುಂಬದ ವಲಯದಲ್ಲಿ ದೊರೆಯುತ್ತಿದ್ದ ನಿಕಟ ಮಾನವೀಯ ಸಂಬಂಧಗಳ ಕೊರತೆಯಿಂದಾಗಿಯೂ, ಅತ್ಯಂತ ಸಂಕೀರ್ಣ ಸಾಮಾಜಿಕ ಪರಿಸ್ಥಿತಿಯಿಂದಾಗಿಯೂ, ಉನ್ನತ ಆದರ್ಶಗಳ ಕೊರತೆಯಿಂದಾಗಿ ಜೀವನವೇ ಅರ್ಥಹೀನವೆನಿಸುವ ಸನ್ನಿವೇಶದಿಂದಾಗಿಯೂ, ಎಲ್ಲ ಕ್ಷೇತ್ರಗಳಲ್ಲಿಯೂ ಸ್ಪರ್ಧಾತ್ಮಕ ಮನೋಭಾವ ಹೆಚ್ಚುತ್ತಿರುವುದರಿಂದಾಗಿಯೂ (ಇನ್ನೂ ಅನೇಕ ಕಾರಣಗಳನ್ನು ಸೇರಿಸಬಹುದು) ಈ ಬಗೆಯ ರೋಗಗಳು ತುಂಬ ಹೆಚ್ಚುತ್ತಿರುವುದಾಗಿ ಕಂಡು ಬರುತ್ತಿದೆ. ಯಾರು ಭಗವದಾದರ್ಶವನ್ನು ಇಟ್ಟುಕೊಂಡು ಅದಕ್ಕನುಗುಣವಾಗಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾರೋ ಅವರು ಇಂತಹ ಸಮಸ್ಯೆಗಳಿಗೆ ಒಳಗಾಗುವುದಿಲ್ಲ. ಒಟ್ಟು ಸಮಾಜದಲ್ಲಿ ಸಾಧ್ಯವಾದಷ್ಟೂ ನೈತಿಕ ಮತ್ತು ಆಧ್ಯಾತ್ಮಿಕ ವಾತಾವರಣವನ್ನು ಕಲ್ಪಿಸುವ ಸಾಮೂಹಿಕ ಪ್ರಯತ್ನವೂ ನಡೆಯಬೇಕು.

ಇತ್ತೀಚಿನ ದಿನಗಳಲ್ಲಿ ತುಂಬ ವ್ಯಾಪಕವಾಗಿ ಕಂಡುಬರುವ ವ್ಯಥೆ ಯಾವುದೆಂದರೆ ದುಗುಡತೆ (depression). ಇದು ಎಲ್ಲ ವಿಷಯದಲ್ಲಿಯೂ ನಿರುತ್ಸಾಹವನ್ನು ಉಂಟುಮಾಡುತ್ತದೆ, ಜೀವನವೇ ಬೇಸರವೆನಿಸುತ್ತದೆ. ಇದು ತೀವ್ರವಾದರೆ ವ್ಯಕ್ತಿಯು ಆತ್ಮಹತ್ಯೆಯ ಪ್ರಯತ್ನ ಮಾಡುತ್ತಾನೆ. ಜೀವನ ಅರ್ಥಹೀನವಾದಾಗ ಹೀಗಾಗುತ್ತದೆ ಎಂದು ಮನಃಶ್ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಒಂದು ವಸ್ತುವು ಅರ್ಥಪೂರ್ಣವಾಗುವುದು ಅದು ಪೂರ್ಣದೊಡನೆ ಕೂಡಿಕೊಂಡಿದ್ದಾಗ. ನಮ್ಮ ವ್ಯಕ್ತಿತ್ವವನ್ನು ಒಂದು ಪೂರ್ಣ ವ್ಯವಸ್ಥೆಯೆಂದು ಸ್ವೀಕರಿಸಿದರೆ ಅದರ ಅಂಗೋಪಾಂಗಗಳು ಅರ್ಥಪೂರ್ಣವಾಗುವುದು ಆ ವ್ಯವಸ್ಥೆಯೊಡನೆ ಸೇರಿಕೊಂಡಿದ್ದಾಗಲೇ; ಅದಕ್ಕಿಂತ ಪ್ರತ್ಯೇಕವಾಗಿ ಅವುಗಳಿಗೆ ಯಾವ ಅರ್ಥವೂ ಇಲ್ಲ. ಹಾಗೆಯೇ ಮನುಷ್ಯಜೀವನವೂ ಅರ್ಥಪೂರ್ಣವಾಗುವುದು ಒಂದು ವ್ಯವಸ್ಥೆಯೊಡನೆ– ಕುಟುಂಬ, ಸಮಾಜ, ಮಾನವಕೋಟಿ ಮುಂತಾದವು – ಸಂಬಂಧಿಸಿದ್ದಾಗ. ವ್ಯಕ್ತಿಯು ಯಾವುದರೊಡನೆಯೂ ತನ್ನನ್ನು ಸಂಬಂಧಿಸಿಕೊಳ್ಳಲು ಅಸಮರ್ಥನಾದಾಗ ಜೀವನದ ಅರ್ಥಹೀನತೆಯನ್ನು ಅನುಭವಿಸುತ್ತಾನೆ. ಜೀವನವೇ ಅರ್ಥಹೀನವಾದಾಗ ಅದಕ್ಕೆ ಸಂಬಂಧಿಸಿದ ಎಲ್ಲವೂ – ವೃತ್ತಿ, ವಿವಿಧ ಅನುಭವಗಳು ಇತ್ಯಾದಿ – ಅರ್ಥಹೀನವೆನಿಸುತ್ತದೆ. ಆದರೆ ಈ ಜೀವನದಲ್ಲಿ ಯಾವ ಸಂಬಂಧವೂ ಶಾಶ್ವತವಲ್ಲ, ಯಥಾರ್ಥವಾದುದಲ್ಲ, ಆದ್ದರಿಂದ ನೆಚ್ಚಿಕೊಳ್ಳಬಹುದಾದುದಲ್ಲ. ಭಗವತ್ಸಂಬಂಧವೊಂದೇ ಶಾಶ್ವತವಾದುದು, ಅದೊಂದೇ ಯಥಾರ್ಥ ಸಂಬಂಧ. ಉಳಿದ ಸಂಬಂಧಗಳೆಲ್ಲ ಭೌತಿಕ ಮತ್ತು ಮಾನಸಿಕವಾದುವು. ಭೌತಿಕ ಮತ್ತು ಮಾನಸಿಕವಾದವುಗಳೆಲ್ಲವೂ ಪರಿವರ್ತನೆಗೆ ಒಳಪಡುವುದಾದ್ದರಿಂದ ಹಾಗೂ ಅನೇಕ ನಿಮಿತ್ತ ಗಳನ್ನು ಅವಲಂಬಿಸಿರುವುದರಿಂದ ಈ ಸಂಬಂಧಗಳಾವುದನ್ನೂ ನೆಚ್ಚಿಕೊಳ್ಳುವಂತಿಲ್ಲ. ಭಗವತ್ಸಂಬಂಧವು ಆಧ್ಯಾತ್ಮಿಕವಾದುದು – ಇದು ಜೀವಾತ್ಮನಿಗೂ ಪರಮಾತ್ಮನಿಗೂ ಇರುವ ಸಂಬಂಧ. ನಾವು ಕೇವಲ ಭೌತಿಕ ಮತ್ತು ಮಾನಸಿಕ ವಲಯದಲ್ಲಿ ಮಾತ್ರ ಉಳಿಯದೆ, ನಮ್ಮನ್ನು ಆಧ್ಯಾತ್ಮಿಕವಾಗಿ ಗುರುತಿಸಿಕೊಂಡಾಗ ಈ ಸಂಬಂಧವು ಏರ್ಪಡುತ್ತದೆ. ನಮ್ಮಲ್ಲಿ ಆಧ್ಯಾತ್ಮಿಕ ಅಂಶವಾದ ದಿವ್ಯತೆಯು ಹೆಚ್ಚು ಹೆಚ್ಚು ಅಭಿವ್ಯಕ್ತವಾದಷ್ಟೂ ಈ ಸಂಬಂಧವು ಹೆಚ್ಚು ದೃಢವಾಗುತ್ತದೆ – ಇದು ಕುಂಡದಲ್ಲಿ ಇರುವ ಗಿಡವನ್ನು ನೆಲದಲ್ಲಿ ನೆಟ್ಟಂತೆ. ಆ ಗಿಡವು ವಿಶಾಲ ವೃಕ್ಷವಾಗಿ ಬೆಳೆದು ಅನೇಕರಿಗೆ ಆಶ್ರಯವನ್ನು ನೀಡುತ್ತದೆ. ಹಾಗೆಯೇ ನಾವು ದೇಹಾತ್ಮಭಾವದ ಕುಂಡದಿಂದ ಹೊರಬಂದು ವಿಶ್ವಾತ್ಮಭಾವದಲ್ಲಿ ನೆಲೆಯೂರಬೇಕು. ಆಗ ದುಗು ಡತೆಯು ದೂರವಾಗುತ್ತದೆ.

ಮಾರ್ಟಿನ್ ಇ.ಪಿ. ಸೆಲಿಗ್ಮನ್ ಎಂಬ ಮನಶ್ಶಾಸ್ತ್ರಜ್ಞರ ಪ್ರಕಾರ ನಿರಾಶಾವಾದ ಮತ್ತು ಅಸಹಾಯಕತೆ ದುಗುಡತೆಗೆ ಕಾರಣ. ಸಮಾಜದ ಬಗ್ಗೆ, ವಿವಿಧ ಪರಿಸ್ಥಿತಿಯ ಬಗ್ಗೆ ಮತ್ತು ತನ್ನ ಶಕ್ತಿಯ

ಬಗ್ಗೆಯೂ ನಿರಾಶಾ ಮನೋಭಾವ ಉಂಟಾದರೆ, 'ಏನಾದರೂ ಹೀಗೆಯೇ ಇದನ್ನು ಸರಿಪಡಿಸಲಾಗುವುದೇ ಇಲ್ಲ' ಎಂಬ ನಿಸ್ಸಹಾಯಕ ಸ್ಥಿತಿ ಉಂಟಾದರೆ ಅದು ದುಗುಡತೆಗೆ ಕಾರಣವಾಗುತ್ತದೆ. ಅನೇಕ ಹತಾಶೆಗಳುಂಟಾದರೆ, ಎಲ್ಲ ಕಡೆಗಳಿಂದಲೂ ಸೋಲುಂಟಾದರೆ ಸ್ವಾಭಾವಿಕವಾಗಿಯೇ ವ್ಯಕ್ತಿಯು ದುಗುಡತೆಗೆ ಒಳಗಾಗುತ್ತಾನೆ. ಇಂತಹ ಪರಿಸ್ಥಿತಿ ಉಂಟಾಗದಿರಬೇಕಾದರೆ ನಾವು ಎರಡು ಗುಣಗಳನ್ನು ಬೆಳಸಿಕೊಳ್ಳಬೇಕು : ನಿರ್ಲಿಪ್ತತೆ ಮತ್ತು ಶರಣಾಗತಿ. ಒಂದು ವಿಷಯ ವಿರಾಗದಿಂದಲೂ ಮತ್ತೊಂದು ಭಗವದನುರಾಗದಿಂದಲೂ ಉಂಟಾಗುತ್ತದೆ.

**ಸರ್ವಾರಂಭಪರಿತ್ಯಾಗೀ :** ಭಕ್ತನು ತಾನಾಗಿಯೇ ತನಗಾಗಿ ಏನನ್ನೂ ಪ್ರಾರಂಭಿಸುವುದಿಲ್ಲ. ಈ ಜೀವನದಲ್ಲಿ ತಾನು ಏನನ್ನಾದರೂ ಸಾಧಿಸಬೇಕು, ತನ್ನ ಹೆಜ್ಜೆಯ ಗುರುತನ್ನು ಬಿಟ್ಟು ಹೋಗಬೇಕು – ಈ ರೀತಿಯ ಮಹತ್ವಾಕಾಂಕ್ಷೆಗಳು ಅವನಲ್ಲಿರುವುದಿಲ್ಲ. ಏಕೆಂದರೆ ಅವನು ತನ್ನ ಜೀವನವನ್ನು ಭಗವಂತನಿಗೆ ಅರ್ಪಿಸಿಕೊಂಡಿರುತ್ತಾನೆ, ಅವನಿಗೆ ತನ್ನತನವಿರುವುದಿಲ್ಲ, ಕರ್ತೃತ್ವಬುದ್ಧಿ ಇರುವುದಿಲ್ಲ. ಎಲ್ಲವನ್ನೂ ಭಗವದಿಚ್ಛೆಗೇ ಬಿಟ್ಟಿರುತ್ತಾನೆ. ಭಗವಂತನು ಅವನನ್ನು ಯಾವುದರಲ್ಲಿ ಬೇಕಾದರೂ ತೊಡಗಿಸಬಹುದು, ಯಾವುದೇ ರೀತಿಯ ಪ್ರೇರಣೆಯನ್ನು ಬೇಕಾದರೂ ನೀಡಬಹುದು. ಅವನನ್ನು ಲೋಕಸಂಗ್ರಹದಲ್ಲಿ ಬೇಕಾದರೂ ತೊಡಗಿಸಬಹುದು, ಅಥವಾ ಲೋಕದಿಂದ ಮರೆಯಾಗಿಯೂ ಇರಿಸಬಹುದು. ಶ್ರೀರಾಮಕೃಷ್ಣರು ಹೇಳುವಂತೆ ಅವನು ಬೆಕ್ಕಿನ ಮರಿಯಂತಿರುತ್ತಾನೆ. ತಾಯಿ ಬೆಕ್ಕು ತನ್ನ ಮರಿಯನ್ನು ಕೆಲವೊಮ್ಮೆ ಹಾಸಿಗೆಯ ಮೇಲೆ, ಕೆಲವೊಮ್ಮೆ ಒಲೆಯ ಪಕ್ಕದಲ್ಲಿ, ಇನ್ನೆಲ್ಲಾದರೂ ಇರಿಸಬಹುದು. ಎಲ್ಲಿರಿಸಿದರೂ ಅದು ತನ್ನ ಪಾಡಿಗೆ ತಾನಿರುತ್ತದೆ.

ಭಕ್ತನು ಯಾವ ಸಂಸ್ಥೆಯನ್ನೂ ಆರಂಭಿಸುವುದಿಲ್ಲ, ಅವನೇ ಒಂದು ಸಂಸ್ಥೆಯಾಗಿರುತ್ತಾನೆ. ಅವನ ಹೆಸರಿನಲ್ಲಿ ಇತರರು ಸಂಸ್ಥೆಗಳನ್ನು ಪ್ರಾರಂಭಿಸುತ್ತಾರೆ. ಅವನೇ ಯಾವ ಕೆಲಸವನ್ನೂ ಮಾಡುವುದಿಲ್ಲ. ಆದರೆ ಅವನ ಹೆಸರಿನಲ್ಲಿ ಅನೇಕ ಕೆಲಸಗಳು ನಡೆಯುತ್ತವೆ. ಅವನು ಪ್ರಾರ್ಥನೆ ಮಾಡಬೇಕಾಗಿಲ್ಲ, ಅವನ ಉಸಿರಾಟವೇ ಪ್ರಾರ್ಥನೆಯಾಗುತ್ತದೆ. ಅವನು ಉಪದೇಶಮಾಡಬೇಕಾಗಿಲ್ಲ, ಅವನ ಮೌನವೇ ಉಪದೇಶವಾಗುತ್ತದೆ. ಅವನು ಅನೇಕ ಕೆಲಸಗಳಲ್ಲಿ ತೊಡಗಿದ್ದರೂ ಅವಾವುವೂ ಅವನದಾಗಿರುವುದಿಲ್ಲ. ಎಲ್ಲ ಕೆಲಸಗಳೂ ನಡೆಯುವುದು ದೇಹೇಂದ್ರಿಯಮನಸ್ಸುಗಳ ಮೂಲಕ. ಭಕ್ತನಿಗೆ ಅವುಗಳೊಡನೆ ತಾದಾತ್ಮ್ಯವಿಲ್ಲದೆ ಇರುವುದರಿಂದ ಅವನಿಗೆ ಯಾವ ಕೆಲಸವೂ ಇಲ್ಲ, ಆದ್ದರಿಂದ ಯಾವ ಆರಂಭವೂ ಇಲ್ಲ.

ಸಾಮಾನ್ಯ ವ್ಯಕ್ತಿಗಳ ಜೀವನವು ಅನೇಕ ಆರಂಭಗಳಿಂದ ಕೂಡಿರುತ್ತದೆ. ಹುಟ್ಟುವುದರಿಂದ ಆರಂಭವಾಗುತ್ತದೆ. ಅನಂತರ ತೆವಳುವ ಆರಂಭ, ಮುಂದೆ ನಡೆಯುವ ಆರಂಭ. ಮತ್ತೆ ಉಣ್ಣುವುದು, ಮಾತನಾಡುವುದು ಆರಂಭವಾಗುತ್ತದೆ. ಕೆಲವು ವರ್ಷಗಳ ನಂತರ ವಿದ್ಯಾರಂಭವಾಗುತ್ತದೆ. ಕೌಮಾರಾವಸ್ಥೆಯನ್ನು ಮುಟ್ಟುವ ಹೊತ್ತಿಗೆ ಭೌತಿಕ ಪ್ರವೃತ್ತಿಗಳೆಲ್ಲವೂ ಆರಂಭವಾಗುತ್ತವೆ. ಅನಂತರ ಕೆಲಸದ ಆರಂಭ, ಮುಂದೆ ಸಂಸಾರದ ಆರಂಭ, ಅದರೊಂದಿಗೆ ಸುಖದುಃಖಗಳ ಆರಂಭ. ಹೀಗೇ ಮುಂದುವರಿದು ಮುದಿತನ ಪ್ರಾರಂಭವಾಗುತ್ತದೆ, ಹಲ್ಲು ಉದುರಲು ಪ್ರಾರಂಭವಾಗುತ್ತದೆ (ಮೊದಲೇ ಯಾರೂ ಉದುರಿಸದಿದ್ದರೆ!). ದೇಹದ ವಿವಿಧ ಅಂಗಾಂಗಗಳೆಲ್ಲ ಮುಷ್ಕರ ಹೂಡಲು ಪ್ರಾರಂಭಿಸುತ್ತವೆ. ಅನಂತರ ಸಾವಿನೊಂದಿಗೆ ಮುಂದಿನ ಜನ್ಮದ ಪ್ರಾರಂಭ. ಭಕ್ತನಲ್ಲಿ ಈ ಎಲ್ಲ ಆರಂಭಗಳೂ ಕೊನೆಗೊಂಡಿರುತ್ತವೆ, ಅವನು ಆರಂಭಶೂನ್ಯ, ಆರಂಭಶೂರನಲ್ಲ. ಇಂಥವನ ಸ್ಥಿತಿಯನ್ನು ಶಂಕರಾಚಾರ್ಯರು ಈ ರೀತಿ ವರ್ಣಿಸುತ್ತಾರೆ:

**ಅಹಿನಿರ್ಲ್ವಯನೀಂ ವಾಯಂ ಮುಕ್ತ್ವಾ ದೇಹಂ ತು ತಿಷ್ಠತಿ ।**
**ಇತಸ್ತತಶ್ಚಾಲ್ಯಮಾನೋ ಯತ್ಕಿಂಚಿತ್ ಪ್ರಾಣವಾಯುನಾ ॥**

*(ವಿವೇಕಚೂಡಾಮಣಿ, ೫೪೯)*

'ನಿಜವಾಗಿಯೂ ಅವನು ಪೊರೆ ಕಳಚಿದ ಹಾವಿನಂತೆ ದೇಹಮುಕ್ತನಾಗಿರುತ್ತಾನೆ. ಪೊರೆಯು ಗಾಳಿಯಿಂದ ಅತ್ತಿತ್ತ ಚಲಿಸುವಂತೆ, ಅವನ ದೇಹವೂ ಪ್ರಾಣವಾಯುವಿನಿಂದ ಕ್ರಿಯಾಶೀಲವಾಗಿರುತ್ತದೆ.'

**ಶುಭಾಶುಭಪರಿತ್ಯಾಗೀ :** ಭಕ್ತನು ಶುಭ ಮತ್ತು ಅಶುಭಗಳನ್ನು ತ್ಯಾಗ ಮಾಡಿರುತ್ತಾನೆ, ಅಂದರೆ ಶುಭಾಶುಭ ಭೇದವನ್ನು ತ್ಯಾಗ ಮಾಡಿರುತ್ತಾನೆ. ವ್ಯಾವಹಾರಿಕ ದೃಷ್ಟಿಯಿಂದ ನೋಡಿದರೆ ಕೆಲವು ಶುಭ ಮತ್ತೆ ಕೆಲವು ಅಶುಭ. ಪಾರಮಾರ್ಥಿಕ ದೃಷ್ಟಿಯಿಂದ ಎಲ್ಲವೂ ಭಗವನ್ಮಯವಾದುದರಿಂದ ಎಲ್ಲವೂ ಶುಭವೇ. ನಾವು ಪೂರ್ಣ ದೃಷ್ಟಿಯನ್ನು ಬೆಳಸಿಕೊಳ್ಳಬೇಕು. ಆಗ ಎಲ್ಲವೂ ಅರ್ಥಪೂರ್ಣವಾಗುವುದರಿಂದ ಶುಭಾಶುಭ ಭೇದ ಕಂಡುಬರುವುದಿಲ್ಲ. ನಾವೊಂದು ವರ್ಣಚಿತ್ರವನ್ನು ನೋಡಿದಾಗ ಅದರ ಮುಖ್ಯಾರ್ಥವನ್ನು ಗ್ರಹಿಸಲು ಅಸಮರ್ಥರಾದರೆ, ಅದರ ಅನೇಕ ಗೆರೆಗಳು, ಕೆಲವು ಬಣ್ಣದ ಭಾಗಗಳು ಅನವಶ್ಯಕ ಎನಿಸಬಹುದು. ಆದರೆ ಚಿತ್ರದ ಪೂರ್ಣ ಅರ್ಥ ನಮಗೆ ತಿಳಿದಾಗ ಎಲ್ಲವೂ ಅರ್ಥಪೂರ್ಣವಾಗುತ್ತದೆ. ಟಿಚ್ ನ್ಹಾಟ್ ಹನ್ ಎಂಬ ಬೌದ್ಧ ಸಂನ್ಯಾಸಿಗಳೊಬ್ಬರು ಹೇಳುತ್ತಾರೆ: ನಾವು ಅಸಹ್ಯವೆಂದು ಪರಿಗಣಿಸುವ ಗೊಬ್ಬರವು ನಾಳೆ ಸುಂದರ ಕುಸುಮವಾಗುತ್ತದೆ, ಹಾಗೆಯೇ ಆ ಕುಸುಮ ಮುಂದೆ ಗೊಬ್ಬರವಾಗುತ್ತದೆ. ಆಂಗ್ಲಭಾಷೆಯ ಒಂದು ಹೇಳಿಕೆ : ಶುದ್ಧ ಸಾಕ್ಷಾತ್ಕಾರಕ್ಕೆ ನಾಂದಿಯಾಗದಂತಹ ಕೊಳಕು ವಿಷಯ ಯಾವುದೂ ಇಲ್ಲ.

ಧ್ಯಾನದ ವೇಳೆ ಅನೇಕ ಶುಭಾಶುಭ ಆಲೋಚನೆಗಳು ಮನಸ್ಸಿನಲ್ಲೇಳುತ್ತವೆ. ಕೆಟ್ಟ ಆಲೋಚನೆಗಳು ಬಂದಾಗ ಮನಸ್ಸಿಗೆ ತುಂಬ ಅಸಮಾಧಾನವಾಗುತ್ತದೆ, ಅತಿಯಾಗಿ ನೊಂದುಕೊಳ್ಳುತ್ತೇವೆ. ಇಲ್ಲಿಯೂ ನಾವು ಉದಾಸೀನ ಭಾವವನ್ನು ತಾಳಬೇಕು. ಒಳಿತು ಕೆಡುಕುಗಳೆಂದು ನಿರ್ಣಯ ಮಾಡದೆ, ಅವು ಕೇವಲ ಆಲೋಚನೆಗಳೆಂದಷ್ಟೇ ಗುರುತಿಸಬೇಕು. ಅನೇಕ ಚಿತ್ತವೃತ್ತಿಗಳಿರುತ್ತವೆ, ಅವುಗಳ

ವಿಷಯ ವೈವಿಧ್ಯಮಯವಾಗಿರುತ್ತವೆ – ಒಳಿತು ಕೆಡುಕುಗಳೆರಡೂ ಇರುತ್ತವೆ. ನಾವು ಪರದೆಯ ಮೇಲೆ ವಿವಿಧ ದೃಶ್ಯಗಳನ್ನು ನೋಡು ವಂತೆ ಅವುಗಳನ್ನು ಸಾಕ್ಷೀಭಾವದಿಂದ ನೋಡಬೇಕು. ಆಗ ನಮ್ಮ ಮೇಲೆ ಅವುಗಳ ಪರಿಣಾಮ ಕಡಿಮೆಯಾಗುತ್ತದೆ. ನಾವು ಕೆಟ್ಟ ಆಲೋಚನೆಗಳನ್ನು ದ್ವೇಷಿಸಿದರೂ ಅವುಗಳಿಗೆ ಪ್ರಾಮುಖ್ಯವನ್ನು ನೀಡಿದಂತಾಗುತ್ತದೆ. ಮನೆಗೆ ಬಂದ ಅತಿಥಿಗಳಿಗೆ ಪ್ರಾಮುಖ್ಯವನ್ನು ನೀಡಿದರೆ ಅವರು ಮನೆಯಲ್ಲಿಯೇ ಉಳಿದುಕೊಂಡುಬಿಡುತ್ತಾರೆ. ಗುಣದೋಷಗಳಾವುವು ಎಂಬುದನ್ನು ಶ್ರೀಕೃಷ್ಣನು ಉದ್ಧವಗೀತೆ ಯಲ್ಲಿ ಹೇಳಿದ್ದಾನೆ :

**ಗುಣದೋಷದೃಶಿರ್ದೋಷಃ ಗುಣಸ್ತೂಭಯವರ್ಜಿತಃ ।**

'ಗುಣದೋಷಗಳನ್ನು ನೋಡುವುದೇ ದೋಷ ಮತ್ತು ಹಾಗೆ ಮಾಡದೆ ಎಲ್ಲವನ್ನೂ ಸಮಾನವಾಗಿ ನೋಡುವುದೇ ಗುಣ.'

**ಭಕ್ತನು ಎಲ್ಲ ವಿಷಯದಲ್ಲಿಯೂ ಸಮನಾಗಿರುತ್ತಾನೆ:** ಅವನು ಶತ್ರು ಮಿತ್ರರಿಬ್ಬರನ್ನೂ ಸಮಾನವಾಗಿ ಕಾಣುತ್ತಾನೆ. ನಿಜವಾಗಿಯೂ ಅವನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ. ಗಾಂಧೀಜಿಯವರನ್ನು ಒಬ್ಬರು ಕೇಳುತ್ತಾರೆ: ''ಕ್ರಿಸ್ತನು ಹೇಳುತ್ತಾನೆ ಶತ್ರುಗಳನ್ನೂ ತನ್ನಂತೆಯೇ ಪ್ರೀತಿಸಬೇಕೆಂದು. ನಿಮ್ಮ ಅಭಿಪ್ರಾಯ ವೇನು?'' ಗಾಂಧೀಜಿ ಮುಗುಳ್ನಕ್ಕು ಹೇಳಿದರು: ''ನಾನು ಯಾರನ್ನೂ ಶತ್ರುವೆಂದು ಪರಿಗಣಿಸುವುದೇ ಇಲ್ಲ.'' ಶತ್ರುತ್ವ ಅನೇಕ ರೂಪಗಳಲ್ಲಿ ಇರುತ್ತದೆ. ಅದು ವ್ಯಕ್ತಿಗತವಾಗಿರಬಹುದು – ನಮಗಾಗದ ಕೆಲವು ವ್ಯಕ್ತಿಗಳಿರಬಹುದು. ಕೆಲವು ಉದ್ಯೋಗ ನಮಗಾಗದೇ ಇರಬಹುದು – ಇದು ಔದ್ಯೋಗಿಕ ಶತ್ರುತ್ವ. ಜಾತೀಯ ಶತ್ರುತ್ವವೂ ಇರುತ್ತದೆ – ಕೆಲವು ಜಾತಿಯವರನ್ನು ನಾವು ದ್ವೇಷಿಸಬಹುದು. ಹೀಗೆ ಜನಾಂಗ, ರಾಷ್ಟ್ರ, ರಾಜಕೀಯ, ಭಾಷೆ, ಸಂಸ್ಕೃತಿ, ವೈಚಾರಿಕತೆ – ಇವೇ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಶತ್ರುತ್ವವಿರುತ್ತದೆ. ಆದರೆ ಭಕ್ತನಲ್ಲಿ ಯಾವುದೇ ಬಗೆಯ ಶತ್ರುತ್ವ ಇರಲು ಸಾಧ್ಯವಿಲ್ಲ. ಶತ್ರುತ್ವ ಮತ್ತು ಭಗವದ್ಭಕ್ತಿ – ಕತ್ತಲೆ ಬೆಳಕುಗಳಂತೆ – ಒಟ್ಟಿಗೆ ಇರಲಾರವು.

ಭಕ್ತನು ಮಾನಾಪಮಾನಗಳನ್ನು ಸಮನಾಗಿ ಕಾಣುತ್ತಾನೆ. ಶ್ರೀಮಾತೆ ಶಾರದಾದೇವಿಯವರನ್ನು ಭಕ್ತರು ದೇವಿಯಂತೆ ಪೂಜಿ ಸುತ್ತಿದ್ದರು. ಹಾಗೆಯೇ ಅವರ ನಿಕಟ ಸಂಬಂಧಿಕರು ಅವರನ್ನು ಅವಮಾನಿಸುತ್ತಿದ್ದರು, ಪೀಡಿಸುತ್ತಿದ್ದರು. ಅವರು ಮಾತ್ರ ಯಾವಾ ಗಲೂ ಶಾಂತಮೂರ್ತಿಯಾಗಿಯೇ ಇರುತ್ತಿದ್ದರು.

**ಸಾಧುಭಿಃ ಪೂಜ್ಯಮಾನೇಽಸ್ಮಿನ್ ಪೀಡ್ಯಮಾನೇಽಪಿ ದುರ್ಜನೈಃ ।**
**ಸಮಭಾವೋ ಭವೇದ್ಯಸ್ಯ ಸ ಜೀವನ್ಮುಕ್ತಲಕ್ಷಣಃ ॥**

*(ವಿವೇಕಚೂಡಾಮಣಿ, ೪೪೦)*

''ಸಾಧುಗಳಿಂದ ಪೂಜಿಸಲ್ಪಟ್ಟಾಗಲೂ ದುರ್ಜನರಿಂದ ಪೀಡಿಸ ಲ್ಪಟ್ಟಾಗಲೂ ಯಾರು ಸಮಭಾವದಲ್ಲಿ ಇರುತ್ತಾರೋ ಅದು ಜೀವ ನ್ಮುಕ್ತನ ಲಕ್ಷಣ.''

ಇದೇ ರೀತಿ ಭಕ್ತನು ಶೀತ–ಉಷ್ಣ, ಸುಖ–ದುಃಖ ಮುಂತಾದ ದ್ವಂದ್ವಗಳ ವಿಷಯದಲ್ಲಿಯೂ ವಿಚಲಿತನಾಗದೆ ಸಮನಾಗಿರುತ್ತಾನೆ.

**ಸಂಗವರ್ಜಿತಃ :** ಭಕ್ತನು ಯಾವ ವಿಷಯಕ್ಕೂ ಅಂಟಿಕೊಳ್ಳುವುದಿಲ್ಲ, ಯಾವ ವಿಷಯವೂ ಅವನಿಗೆ ಅಂಟಿಕೊಳ್ಳುವುದಿಲ್ಲ. ಶ್ರೀರಾಮ ಕೃಷ್ಣರು ಹೇಳುವಂತೆ ಅವನು ಕೆಸರಿನ ಮೀನಿನಂತಿರುತ್ತಾನೆ. ಆ ಮೀನಿಗೆ ಕೆಸರು ಅಂಟುವುದಿಲ್ಲ. ಆಕಾಶದಲ್ಲಿ ಹಾರುವ ಹಕ್ಕಿ ಯಾವ ಹೆಜ್ಜೆಯ ಗುರುತನ್ನೂ ಬಿಡುವುದಿಲ್ಲ. ಅದರಂತೆಯೇ ಭಕ್ತನ ಮನಸ್ಸಿ ನಲ್ಲಿ ಏನೇನೋ ಆಲೋಚನೆಗಳು ಹಾರಾಡುತ್ತಿದ್ದರೂ ಯಾವ ಸಂಸ್ಕಾರವನ್ನೂ ಉಂಟುಮಾಡುವುದಿಲ್ಲ. ಮಹಾತ್ಮರ ಮನಸ್ಸು ಕನ್ನಡಿ ಯಂತೆ ಎಂದು ಹೇಳುತ್ತಾರೆ. ಕನ್ನಡಿಯು ಯಾವುದನ್ನೂ ತಿರಸ್ಕರಿಸು ವುದಿಲ್ಲ, ಎಲ್ಲವನ್ನೂ ಸ್ವೀಕರಿಸುತ್ತದೆ, ಆದರೆ ಯಾವುದನ್ನೂ ಇಟ್ಟು ಕೊಳ್ಳುವುದಿಲ್ಲ. ಅವನು ಎಲ್ಲರನ್ನೂ ಪ್ರೀತಿಸುತ್ತಾನೆ, ಅದರ ಹಿಂದೆ ವ್ಯಾಮೋಹವಿರುವುದಿಲ್ಲ. ಸ್ವಾಮಿ ವಿವೇಕಾನಂದರು ಹೇಳುವಂತೆ, ಅವನು ಯಾವುದೇ ವಿಷಯದಲ್ಲಿ ತುಂಬ ಆಸಕ್ತನೂ ಆಗಬಲ್ಲ, ಅದೇ ಸಂದರ್ಭದಲ್ಲಿ ನಿರಾಸಕ್ತನೂ ಆಗಬಲ್ಲ; ಆಸಕ್ತಿ ಮತ್ತು ಅನಾಸಕ್ತಿ – ಎರಡೂ ಶಕ್ತಿಗಳು ಅವನಲ್ಲಿ ಸಮನಾಗಿರುತ್ತವೆ. ಅವನು ನಿರ್ಲಿಪ್ತ ಮನೋಭಾವದಿಂದ ಎಲ್ಲವನ್ನೂ ನೋಡುತ್ತಾನೆ, ಕೇಳುತ್ತಾನೆ, ಎಲ್ಲರೊಡನೆಯೂ ಬೆರೆಯುತ್ತಾನೆ, ಎಲ್ಲರನ್ನೂ ಪ್ರೀತಿಸುತ್ತಾನೆ.

ಮೂರು ಬಗೆಯ ಸಂಗವನ್ನು ನಾವು ಗುರುತಿಸಬಹುದು. ಮೊದಲನೆಯದಾಗಿ ವಿಷಯಸಂಗ. ಇಂದ್ರಿಯ ವಿಷಯ, ಹಣ, ಕೀರ್ತಿ, ಸ್ಥಾನ, ಮಾನ ಮುಂತಾದ ವಿಷಯಗಳಲ್ಲಿ ತೀವ್ರ ಆಸಕ್ತಿ ಯನ್ನು ವಿಷಯಸಂಗ ಎಂದು ಕರೆಯಬಹುದು. ಎರಡನೆಯದಾಗಿ ಅಭಿಪ್ರಾಯಸಂಗ ಅಥವಾ ಮತಸಂಗ. ಅನೇಕರಲ್ಲಿ ವಿಷಯಸಂಗ ಇಲ್ಲದಿದ್ದರೂ ತಮ್ಮ ಅಭಿಪ್ರಾಯಗಳಿಗೆ ತುಂಬ ಅಂಟಿಕೊಂಡಿರು ತ್ತಾರೆ. ತಮ್ಮ ಅಭಿಪ್ರಾಯವೇ ಸರಿ, ತಮ್ಮ ನಿರ್ಣಯವೇ ಸರಿ ಎಂದು ಆಗ್ರಹಪೂರ್ವಕವಾಗಿ ಅವುಗಳಿಗೆ ಅಂಟಿಕೊಂಡಿರುತ್ತಾರೆ, ಏನೇ ಆದರೂ ಬಿಟ್ಟುಕೊಡುವುದಿಲ್ಲ. ಧಾರ್ಮಿಕ ಮತಾಭಿಮಾನವೂ ಇದೇ ವರ್ಗಕ್ಕೆ ಸೇರುತ್ತದೆ. ಮೂರನೆಯದು ಸಾಧನೆಯ ಸಂಗ. ಪ್ರಾರಂಭದಲ್ಲಿ ಪೂಜೆ, ಸ್ತೋತ್ರ, ನಾಮಜಪ, ಸಂಕೀರ್ತನೆ ಮುಂತಾದ ಬಾಹ್ಯ ಕ್ರಿಯೆಗಳಿಗೆ ಸಂಬಂಧಿಸಿದ ಸಾಧನೆಗಳೊಂದಿಗೆ ನಾವು ಆಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸುತ್ತೇವೆ. ಇವು ಧ್ಯಾನ, ನಿರಂತರ ಭಗವತ್ ಚಿಂತನೆ, ಭಗವದ್ ಭಾವದಲ್ಲಿ ತಲ್ಲೀನತೆ ಮುಂತಾದ ಸಾಧನೆಯ ಉನ್ನತ ಸ್ತರಕ್ಕೆ ಹಾದಿ ಮಾಡಿಕೊಡುತ್ತವೆ. ಮನಸ್ಸು ಉನ್ನತ ಸ್ಥಿತಿಯನ್ನು ಮುಟ್ಟಿದಾಗಲೂ ಈ ಬಾಹ್ಯ ಸಾಧನೆ ಗಳಿಗೆ ಅಂಟಿಕೊಂಡಿದ್ದರೆ ಉನ್ನತ ಸ್ತರಕ್ಕೆ ಏರಲಾಗುವುದಿಲ್ಲ. ಅನೇಕರು ಸಾಧನೆಯ ಕೆಳಗಿನ ಹಂತದಲ್ಲಿಯೇ ಸಿಕ್ಕಿಹಾಕಿಕೊಂಡು ಬಿಡುತ್ತಾರೆ, ಅನೇಕ ವರ್ಷಗಳ ಅಭ್ಯಾಸದಿಂದ ಅವುಗಳನ್ನು ಬಿಡಲು ಮನಸ್ಸಾಗುವುದಿಲ್ಲ. ಶ್ರೀರಾಮಕೃಷ್ಣರು ಇನ್ನೂ ಮುಂದೆಹೋಗು ಎಂಬ ಕತೆಯನ್ನು ಹೇಳುತ್ತಿದ್ದರು. ಒಬ್ಬ ಕಟ್ಟಿಗೆ ಮಾರುವವನು ಪ್ರತಿ

ದಿನ ಕಾಡಿಗೆ ಹೋಗಿ ಕಟ್ಟಿಗೆ ಸಂಗ್ರಹಿಸುತ್ತಿದ್ದನು. ಒಂದು ದಿನ ಒಬ್ಬ ಬ್ರಹ್ಮಚಾರಿ ಇವನನ್ನು ನೋಡಿ, ''ಇನ್ನೂ ಮುಂದೆ ಹೋಗು'' ಎಂದು ಆದೇಶಿಸಿದನು. ಅವನು ಮರುದಿನ ಮುಂದೆ ಹೋದಾಗ ಗಂಧದ ವನ ಸಿಕ್ಕಿತು. ಅದನ್ನು ಕತ್ತರಿಸಿ, ಮಾರಿ ಆತ ತುಂಬ ಹಣ ಸಂಪಾದಿಸಿದನು. ಇನ್ನೂ ಮುಂದೆ ಹೋಗು ಎಂಬ ಆದೇಶ ಆತನನ್ನು ಅಲ್ಲಿಯೇ ಉಳಿಯಲು ಬಿಡಲಿಲ್ಲ. ಅವನು ಇನ್ನೂ ಮುಂದುವರಿದಾಗ ಬೆಳ್ಳಿಯ ಗಣಿ, ಚಿನ್ನದ ಗಣಿ, ವಜ್ರದ ಗಣಿಗಳು ಕ್ರಮವಾಗಿ ಸಿಕ್ಕಿದವು. ಹೀಗೆ ಅವನು ಪ್ರಪಂಚದಲ್ಲಿಯೇ ದೊಡ್ಡ ಶ್ರೀಮಂತನಾದನು. ಆದ್ದರಿಂದಲೇ ಶ್ರೀರಾಮಕೃಷ್ಣರು, ಸಮುದ್ರದ ಆಳಕ್ಕೆ ಮುಳುಗಬೇಕು, ಮುತ್ತುರತ್ನಗಳು ದೊರೆಯುತ್ತವೆ; ಕೇವಲ ನೀರಿನ ಮೇಲೆ ತೇಲುತ್ತಿದ್ದರೆ ಪ್ರಯೋಜನವಿಲ್ಲ ಎಂದು ಹೇಳುತ್ತಿದ್ದರು. ಕೇವಲ ಸಾಧನೆಗೇ ಅಂಟಿಕೊಂಡು ಬಿಟ್ಟರೆ ಸಾಧ್ಯವು ದೊರೆಯುವುದಿಲ್ಲ.

**ಮೌನೀ:** ಭಕ್ತನು ಮೌನಿಯಾಗಿರುತ್ತಾನೆ. ಅವನು ಇತರರಿಗಿಂತ ಭಗವಂತನೊಡನೆ ಹೆಚ್ಚು ಮಾತನಾಡುತ್ತಾನೆ– ಅದು ನಿಶ್ಶಬ್ದ ಸಂಭಾಷಣೆ. ಶಂಕರಾಚಾರ್ಯರು 'ವಿವೇಕಚೂಡಾಮಣಿ'ಯಲ್ಲಿ ಹೇಳುತ್ತಾರೆ :

**ಯೋಗಸ್ಯ ಪ್ರಥಮದ್ವಾರಂ ವಾಙ್‌ನಿರೋಧಃ ।**

'ಯೋಗದ ಮೊದಲ ಬಾಗಿಲೇ ಮಾತಿನ ನಿಗ್ರಹ.' The True Spouse of Jesus Christ ಎಂಬ ಗ್ರಂಥದಲ್ಲಿ ಮೌನದ ಬಗ್ಗೆ ಈ ಹೇಳಿಕೆಗಳು ಬರುತ್ತವೆ:

''ಪ್ರಾರ್ಥನೆಯ ಭಾವವನ್ನು ಪಡೆಯುವುದಕ್ಕೆ ಮತ್ತು ಭಗವಂತನೊಡನೆ ನಿರಂತರ ಮಾತನಾಡುವುದಕ್ಕೆ ಮೌನ ಉತ್ತಮ ಸಾಧನೆ. ಮೌನದಿಂದ ಭಕ್ತಿ ಸುರಕ್ಷಿತವಾಗುತ್ತದೆ. ಮೌನದಲ್ಲಿ ಒಳ್ಳೆಯ ಆಲೋಚನೆಗಳು ಅಂತರಂಗದಿಂದ ಪುಟಿದೇಳುತ್ತವೆ... ಯಾರು ಜನರೊಡನೆ ಅತಿಯಾಗಿ ಮಾತನಾಡುತ್ತಾರೊ ಅವರು ದೇವರೊಡನೆ ಅತ್ಯಲ್ಪ ಮಾತನಾಡುತ್ತಾರೆ... ಅತಿಯಾಗಿ ಮಾತನಾಡುವವರು ತಮ್ಮ ದೋಷವನ್ನು ನೋಡಲಾರರು.''

ಲಿನ್ ಯುಟಾಂಗ್ ಎಂಬುವವರು ಹೇಳುತ್ತಾರೆ: ''ಮನುಷ್ಯನಲ್ಲಿರುವ ಶಬ್ದಗಳ ಪ್ರೀತಿಯು ಅಜ್ಞಾನದ ಮೊದಲನೆಯ ಮೆಟ್ಟಲು, ಹಾಗೂ ಅವನ ನಿರ್ವಚನ ಪ್ರೀತಿ ಎರಡನೆಯ ಮೆಟ್ಟಲು.'' ಡ್ಯೋಜಿನಸ್ ಎಂಬ ಗ್ರೀಕ್ ಜ್ಞಾನಿಯು ಹೇಳುತ್ತಾನೆ: ನಮಗೆ ಎರಡು ಕಿವಿಗಳಿವೆ ಮತ್ತು ಒಂದು ನಾಲಗೆ ಇದೆ. ಇದರ ಅರ್ಥ ನಾವು ಹೆಚ್ಚು ಕೇಳಬೇಕು ಮತ್ತು ಕಡಮೆ ಮಾತನಾಡಬೇಕು ಎಂದು. ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದ ಈ ಕೆಳಗಿನ ಹೇಳಿಕೆಯೂ ಸ್ಮರಣಯೋಗ್ಯ: ''ನಾವು ಉಚ್ಚರಿಸುವ ಪ್ರತಿಯೊಂದು ಪದವೂ ಮೂರು ಬಾಗಿಲುಗಳನ್ನು ದಾಟಿಕೊಂಡು ಬರಬೇಕು. ಮೊದಲನೆಯ ಬಾಗಿಲಿನಲ್ಲಿರುವ ದ್ವಾರಪಾಲಕನು 'ಇದು ಸತ್ಯವೆ?' ಎಂದು ಕೇಳಬೇಕು. ಎರಡನೆಯ ದ್ವಾರಪಾಲಕನು 'ಇದು ಆವಶ್ಯಕವೆ?' ಎಂದು ಕೇಳಬೇಕು. ಮೂರನೆಯವನು 'ಇದು ದಯಾಪೂರ್ಣವೆ?' ಎಂದು ಕೇಳಬೇಕು.''

ಆದರೆ ಕೇವಲ ಮಾತನಾಡದೆ ಇರುವುದು ಮಾತ್ರ ಮೌನವಲ್ಲ– ಮನಸ್ಸೂ ಸುಮ್ಮನಿರಬೇಕು. ಮನಸ್ಸಿನ ಮೌನಕ್ಕೆ ಮಾತಿನ ಮೌನವು ಸಹಕಾರಿಯಾಗಬೇಕು. ಅದುಬಿಟ್ಟು ಮಾತನಾಡದೆ ಕಾಗದದ ಮೂಲಕವೊ ಅಂಗವಿನ್ಯಾಸಗಳ ಮೂಲಕವೊ ಸಂಭಾಷಣೆ ನಡೆಸಿದರೆ ಅಂತಹ ಮೌನಕ್ಕಿಂತ ಮಾತೇ ಒಳ್ಳೆಯದು – ಇತರರಿಗಾದರೂ ಅನಾನುಕೂಲವಾಗುವುದಿಲ್ಲ. ತುಟಿ ಅಲುಗಾಡದಿರುವುದೇ ಮೌನವಲ್ಲ, ಮನಸ್ಸಿನ ಅಲುಗಾಟ ನಿಂತರೆ ಅದು ನಿಜವಾದ ಮೌನ. ಶ್ರೀರಮಣ ಮಹರ್ಷಿಗಳ ಹತ್ತಿರ ಬಂದು ಒಬ್ಬ ಭಕ್ತನು ಕೇಳಿದನಂತೆ, ''ಆತ್ಮನನ್ನು ಪಡೆಯುವುದಕ್ಕೆ ಏನು ಮಾಡಬೇಕು?'' ಎಂದು. ಮಹರ್ಷಿಗಳು ''ಸುಮ್ಮನಿರು'' ಎಂದು ಹೇಳಿದರಂತೆ.

**ಅನಿಕೇತಃ** ಭಕ್ತನು ಮನೆಯಿಲ್ಲದವನಾಗಿರುತ್ತಾನೆ. ಅಂದರೆ ಅವನು ಮನೆ ಬಿಟ್ಟಿರುತ್ತಾನೆ ಎಂದಲ್ಲ. ಅವನು 'MBBS' ಅಲ್ಲ – '**ಮ**ನೆ **ಬಿ**ಟ್ಟು **ಬೀ**ದಿ **ಸು**ತ್ತುವವ'ನಲ್ಲ. ನಿನ್ನ ಮನೆಯಲ್ಲಿ ನೀನು ಅತಿಥಿಯಂತಿರು, ಯಜಮಾನನಂತೆ ಅಲ್ಲ ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇಂಥವನನ್ನೇ ಅನಿಕೇತ ಎಂದು ಕರೆಯುವುದು. ಯಾವುದರಲ್ಲಿ ನಿಮ್ಮ ಮನಸ್ಸು ನೆಲೆಸಿರುತ್ತದೊ ಅದು ನಿಮ್ಮ ಮನೆ. ನಮ್ಮ ಮನ ಎಲ್ಲಿರುತ್ತದೊ ಅದೇ ಮನೆ. ವಿಷಯವಸ್ತುವಿನಲ್ಲಿ ಮನಸ್ಸು ನೆಲೆಸಿದ್ದರೆ ಅದೇ ನಮ್ಮ ಮನೆಯಾಗುತ್ತದೆ. ಅದರಿಂದ ಹೊರಬರುವುದೇ ಮನೆಯನ್ನು ಬಿಡುವುದು, ಅದರಿಂದ ಹೊರಬರದೆ ನಾವು ಬರಿಯ ಗೃಹತ್ಯಾಗ ಮಾಡಿದರೆ ಅನಿಕೇತನರಾಗುವುದಿಲ್ಲ. ಮನೆ ಎಂದರೆ ಒಂದು ಆಶ್ರಯ. ಭಗವಂತನಲ್ಲಿಯೇ ಆಶ್ರಯ ಪಡೆದವನಿಗೆ ಬೇರೆ ಆಶ್ರಯ ಬೇಕಾಗುವುದಿಲ್ಲ. ಅವನು ಅನಿಕೇತನನಾಗುತ್ತಾನೆ. ಅವನು ಮನೆಯಲ್ಲಿದ್ದರೂ 'ನಾನು' 'ನನ್ನದು' ಎಂಬ ಭಾವವಿಲ್ಲದೆ ಅತಿಥಿಯಂತಿರುತ್ತಾನೆ.

'ನಾನು', 'ನನ್ನದು' ಎಂಬ ಭಾವವೇ ಒಂದು ಮನೆ, ಗೃಹಬಂಧನಕ್ಕಿಂತಲೂ ಇದು ಅಪಾಯಕಾರಿ. ಗೃಹಬಂಧನವಿಲ್ಲದವನನ್ನೂ ಈ ಮನೆಯ ಬಂಧನ ಕಾಡುತ್ತದೆ. ಸ್ವಾಮಿ ವಿವೇಕಾನಂದರು ಹೇಳುವಂತೆ, ಒಬ್ಬ ಭಿಕ್ಷುಕ ಏನೂ ಇಲ್ಲದಿದ್ದರೂ ತನ್ನ ಭಿಕ್ಷಾಪಾತ್ರೆಗೇ ಅವನು ಅಂಟಿಕೊಂಡಿದ್ದು ಅದೇ ಒಂದು ದೊಡ್ಡ ಬಂಧನವಾಗಬಹುದು. ಅವನ ಪಾಲಿಗೆ ಅದೇ ಮನೆ. 'ನಾನು', 'ನನ್ನದು' ಎಂಬ ಭಾವ ಹೊರಟುಹೋದರೆ ಅವನು ಎಲ್ಲೇ ಇದ್ದರೂ ಅನಿಕೇತನನಾಗಿರುತ್ತಾನೆ. ಕುಲಾರ್ಣವ ತಂತ್ರದ ಒಂದು ಶ್ಲೋಕ ಹೀಗಿದೆ:

**ದ್ವೇ ಪದೇ ಬಂಧಮೋಕ್ಷಾಯ ಮಮೇತಿ ನಿರ್ಮಮೇತಿ ಚ ।**
**ಮಮೇತಿ ಬದ್ಧ್ಯತೇ ಜಂತುರ್ನ ಮಮೇತಿ ವಿಮುಚ್ಯತೇ ॥**

''ಬಂಧ ಮತ್ತು ಮೋಕ್ಷಗಳನ್ನು ಸೂಚಿಸುವ ಎರಡು ಪದಗಳಿವೆ. ಅವಾವುದೆಂದರೆ ಮಮ ಮತ್ತು ನಿರ್ಮಮ (ನನ್ನದು ಮತ್ತು ನನ್ನ